

# ಮಕ್ಕಳ 'ಆಯ್ಕೆ'ಗಳು ಹೇಗಿರಬೇಕು?

**ಮಕ್ಕಳ ಆಯ್ಕೆಗಳು ಸುಂದರವಾಗಿರಬೇಕು ಎಂದು ಯಾವ ಅಪ್ಪ ಅಮ್ಮ ಬಯಸುವುದಿಲ್ಲ! ಆದರೆ ಅದಕ್ಕೆ ಪೂರಕವಾದ ವಾತಾವರಣ ನಿರ್ಮಿಸುವುದು ಕೂಡ ಅಪ್ಪ ಅಮ್ಮನ ಹೊಣೆಯಾಗಿರುತ್ತದೆ.**

■ ಸ್ವಯಂಪ್ರಭಾ

ಕಳೆದ ಮಳೆಗಾಲದಲ್ಲಿ ಸುನೀತಾಳ ಮನೆಗೆ ಹಾವು ಬಂದಿತ್ತು. ಅದೊಂದು ವಿಷಯುಕ್ತ ಕನ್ನಡಿ ಹಾವು ಎಂದು ಗೊತ್ತಾದ ಕೂಡಲೇ ಎಲ್ಲರೂ ಸೇರಿ ಅದನ್ನು ಕೊಲ್ಲುವುದೆಂದು ತೀರ್ಮಾನ ಮಾಡಿದರು. ಅದಕ್ಕೆ ಬೇಕಾದ ಹತಾರಗಳನ್ನು ತಯಾರು ಮಾಡಿಕೊಂಡು, ಹಾವನ್ನು ಹುಡುಕಾಡಿ, ಕೊನೆಗೆ ಯಾರೋ ಒಬ್ಬರು ಹಾವಿನ ಮೇಲೊಂದು ಮಣೆ ಇಟ್ಟು ಅದನ್ನು ಹಿಡಿದುಬಿಟ್ಟರು. ಅದು ಎಲ್ಲಿಯೂ ಹೋಗದಂತೆ ತಡೆದು ಕೊಲ್ಲುವುದೆಂಬುದು ಅವರ ಯೋಚನೆಯಾಗಿತ್ತು. 'ಹಾವು ಸಿಕ್ಕಿತು' ಎಂದು ಹೇಳಿದ ಕೇಶವಣ್ಣ, 'ಇಲ್ಲಿರುವ ಮಕ್ಕಳನ್ನೆಲ್ಲ ಒಳಗೆ ಕಳುಹಿಸಿ, ಮಕ್ಕಳೆಲ್ಲ ಇದನ್ನು ನೋಡಬಾರದು' ಎಂದು ಬೊಬ್ಬೆ ಹಾಕಿದರು.

ಕೋಳಿಯನ್ನೋ ಕುರಿಯನ್ನೋ ಕಡಿಯುವಾಗಲೂ ದೊಡ್ಡವರು ಇದೇ ಮಾತನ್ನು ಹೇಳುತ್ತಾರೆ. 'ಮಕ್ಕಳನ್ನು ಆಚೆ ಕರೆದುಕೊಂಡು ಹೋಗಿ' ಸಮುದ್ರದಲ್ಲಿ ಮೀನುಗಾರಿಕೆಗೆ ಹೋಗುವಾಗಲೂ ಬಲೆಹಾಕಿ ಆ ಬಲೆಯಲ್ಲಿ ಮೀನನ್ನು ಎಳೆದ ಬಳಿಕ, ಬಲೆಯಲ್ಲಿ ಸಿಕ್ಕಿ ಹಾಕಿಕೊಂಡು ಪಟಪಟನೇ ಹಾರುವ ಮೀನುಗಳನ್ನು, 'ನೋಡಬೇಡ್ರೋ ಹೋಗ್ರಿ ಆಚೆ' ಎಂದು ಎಳೆಯರನ್ನು ದೂರಕ್ಕೆ ತಳ್ಳುತ್ತಾರೆ. ಬದುಕಿಗೆ ಅನಿವಾರ್ಯವಾಗಿ ಕೆಲವೊಮ್ಮೆ ಹಿಂಸೆಯ ಕ್ಷಣಗಳನ್ನು ದಾಟಬೇಕಾಗುತ್ತದೆ. ಅಂತಹ ಸಂದರ್ಭದಲ್ಲೆಲ್ಲ ಹಿರಿಯರು, 'ಮಕ್ಕಳನ್ನು ದೂರ ಕರೆದುಕೊಂಡು ಹೋಗಿ' ಎಂದು ಹೇಳುವುದು ವಾಡಿಕೆ. ಇದೇ ಮಕ್ಕಳು ಮುಂದಕ್ಕೆ, ತಾವೂ ಕೋಳಿ ಕೊಯ್ದು ಸಾರು ಮಾಡುವವರೇ ಆದರೂ, ಆ ಕ್ಷಣಗಳನ್ನು ಅವರ ಎಳೆ ಮನಸ್ಸು ನೋಡಬಾರದು ಎಂದು ದೊಡ್ಡವರು ಆಶಿಸುವುದು ಏತಕ್ಕೆ? ಮಕ್ಕಳ ಮೃದು ಮನಸ್ಸು ಚೆಂದಾಗಿಯೇ ಇರಲಿ ಎಂಬ ಉದ್ದೇಶ ಅವರದು.

ಮನುಷ್ಯನ ಮನಸ್ಸಿಗೆ ಆಕಾರವಿಲ್ಲ. ಅದನ್ನು ಬಾಲ್ಯದಿಂದಲೂ ಹೇಗೆ ತಟ್ಟಿ ತಟ್ಟಿ ರೂಪಿಸುತ್ತೇವೆಯೋ, ಹಾಗೆಯೇ ಅದು ಬೆಳೆಯುತ್ತ, ಗಟ್ಟಿಯಾಗುತ್ತಾ ಹೋಗುತ್ತದೆ. ಈ ಜಗತ್ತನ್ನು ಒಂದು ಸಾಧ್ಯತೆಯ ಮಹಾಗುಚ್ಛವೆಂದು ಭಾವಿಸಬಹುದೇನೋ. ಹಾಗಾದರೆ ಇನ್ನೂ ಹಸಿಯಾಗಿರುವ ಆ ಎಳೆ ಮನಸ್ಸಿನ ಮೇಲೆ ಮೂಡಬೇಕಾದ ಚಿತ್ರಗಳು, ಮನಸ್ಸುಗಳು ಗ್ರಹಿಸಬೇಕಾದ 'ಸಾಧ್ಯತೆಗಳು' ಯಾವುವು? ಜೀವಕುಲವನ್ನು ಪ್ರೀತಿಸುವ ಯಾರೇ ಆದರೂ, ಈ ಪ್ರಶ್ನೆಯನ್ನು ಮನದಲ್ಲಿ ಇರಿಸಿಕೊಂಡು 'ಒಳ್ಳೆಯದನ್ನೇ ಕಾಣು ಮಗು' ಎಂದು ಹಾರೈಸುತ್ತಾರೆ.

'ಎ ಎಂಬ ವ್ಯಕ್ತಿಯೊಬ್ಬ ತಪ್ಪು ಮಾಡಿದ್ದಾನೆ. ಬಿ ಎಂಬ ಇವನೊಬ್ಬ ಅವನನ್ನು ಹಿಡಿದು ಬಡಿಯುತ್ತಿದ್ದಾನೆ' ಎಂಬಂತಹ ದೃಶ್ಯವನ್ನು ನೋಡುವ ಮಗುವಿನ ಮನಸ್ಸು ಏನನ್ನು ಗ್ರಹಿಸುತ್ತದೆ ಎಂಬುದನ್ನು ನಿರ್ದಿಷ್ಟವಾಗಿ ಹೇಳುವುದು ಸಾಧ್ಯವಿಲ್ಲ. ಅವನು ತಪ್ಪು ಮಾಡಿದ್ದಕ್ಕೆ ಹೀಗೆ ಹೊಡೆಯುತ್ತಿದ್ದಾರೆ, ನಾನೂ ಹೊಡೆಯುವವನಂತೆ ಬಲಿಷ್ಠನಾಗಬೇಕು ಎಂದು ಮಗು ಭಾವಿಸಿದರೆ ಅದೊಂದು ಸಾಧ್ಯತೆ. ತಪ್ಪು ಮಾಡಿದಾಗ ದುರ್ಬಲನಾದ್ದರಿಂದ ತಿರುಗಿ ಬಡಿಯುತ್ತಿಲ್ಲ, ಸದೃಢನಾದರೆ ಈ ಸ್ಥಿತಿ ಬರುತ್ತಿರಲಿಲ್ಲ ಎನ್ನುವುದು ಮತ್ತೊಂದು ಸಾಧ್ಯತೆ. ತಪ್ಪು ಮಾಡಬಾರದು, ಹೀಗೆ ಸುಮ್ಮನೇ ಹೊಡೆಸಿಕೊಳ್ಳಬೇಕಾಗುತ್ತದೆ ಎನ್ನುವುದು ಮಗದೊಂದು ಸಾಧ್ಯತೆ.

ಹೀಗೆ ಘಟನೆಯೊಂದಕ್ಕೆ ಹಲವಾರು ಸಾಧ್ಯತೆಗಳನ್ನು ಪಟ್ಟಿಮಾಡಬಹುದು. ಪ್ರತೀ ಸಾಧ್ಯತೆಯ ನಡುವಿನ ಗೆರೆಯು ಅತೀ ತೆಳುವಾಗಿರುತ್ತದೆ. ಅದಕ್ಕೆಂದೇ ಹಿರಿಯರು, ಮಕ್ಕಳು ಎಳೆವಯಸ್ಸಿನಲ್ಲಿ ತಪ್ಪು ಯಾವುದೆಂದು ಅರಿಯಬೇಕೇ ಹೊರತು, ಹಿಂಸೆಯನ್ನು ನೋಡಬಾರದು ಎಂಬ ಭಾವನೆಯನ್ನು ಹೊಂದಿದ್ದರು. ಮಕ್ಕಳಿಗೆ ಸತ್ಯವನ್ನು ತಿಳಿಸಿಕೊಡುವುದಕ್ಕೆ ಎಷ್ಟೊಂದು ವಿಧಾನಗಳನ್ನು ಹುಡುಕಿದ್ದರು. ಸತ್ಯವು ಕಟುವಾಗಿ, ಗಂಭೀರವಾಗಿ, ಹಿಂಸಾತ್ಮಕವಾಗಿದ್ದರೆ, ತುಸು ಪರೋಕ್ಷವಾಗಿ ಬಳಸುದಾರಿಯಲ್ಲಿ ಪ್ರಸ್ತುತಗೊಳ್ಳಬೇಕು ಎಂದು ಭಾವಿಸಿದ್ದರು. ಕತೆಗಳಾಗಿ, ಕಾವ್ಯಗಳಾಗಿ, ಗದ್ಯದ ಓದಾಗಿ, ನಾಟಕದಲ್ಲಿ ಸಾಂಕೇತಿಕವಾಗಿ, ಶಿಲ್ಪವಾಗಿ, ಚಿತ್ರವಾಗಿ... ಅಥವಾ ಮತ್ತಾವುದೋ ಒಂದು ವಿಧಾನದಲ್ಲಿ ಸತ್ಯವು ಪ್ರಸ್ತುತಗೊಳ್ಳುವುದು ಉತ್ತಮವೆಂದು ಬಗೆದರು.

ಇಂದು ಸನ್ನಿವೇಶಗಳನ್ನು ಇದ್ದಹಾಗೆಯೇ ಶೂಟಿಂಗ್ ಮಾಡಿ ದೃಶ್ಯವನ್ನು ಕಾಪಿಟ್ಟುಕೊಳ್ಳುವ ಕಾಲ. ಸತ್ಯವನ್ನು ಹೇಳಬೇಕೆಂದು ಪೋಷಕರಲ್ಲಿಯೂ ಎಲ್ಲಿಲ್ಲದ ಉತ್ಸಾಹವು ಉಕ್ಕೇರುತ್ತಿದೆ. ಈ ಸಂದರ್ಭದಲ್ಲಿ ಮಕ್ಕಳು ಎಷ್ಟರ ಮಟ್ಟಿಗೆ ಸತ್ಯವನ್ನು ತಾಳಿಕೊಳ್ಳಬಹುದು ಎಂದು ಯೋಚಿಸುವ ಪುರುಸೊತ್ತೇ ಹಿರಿಯರಿಗೆ ಇಲ್ಲ.

ಎರಡನೇ ಮಹಾಯುದ್ಧದ ಸಂದರ್ಭವನ್ನು ಚಿತ್ರಿಸುವ ಒಂದು ಕಾಮಿಡಿ ಸಿನಿಮಾ 'ಲೈಫ್ ಈಸ್ ಬ್ಯೂಟಿಫುಲ್'. ಕಾಮಿಡಿ ಎಂದರೂ, ಅದು ಕಟ್ಟಿಕೊಡುವ ನೋವಿನ ಗೀರು ಆಳವಾದುದು. ಆ ಸಿನಿಮಾದಲ್ಲಿ ಹಿಟ್ಲರ್‌ನ ಗ್ಯಾಸ್ ಚೇಂಬರ್‌ನತ್ತ ಪಯಣಿಸುವ ದಂಪತಿಗಳು ತಮ್ಮ ಮಗನಿಗೆ, ತಾವು ಎಂಥ ಕ್ರೂರ ಪರಿಸ್ಥಿತಿಯಲ್ಲಿ ಇದ್ದೇವೆ ಎಂಬುದನ್ನು ತಿಳಿಸದೇ, ಪರಿಸ್ಥಿತಿಯನ್ನು 'ಹಗುರ' ಮಾಡಿ ಹೇಳಿರುತ್ತಾರೆ. ಕಟ್ಟ ಕಡೆಗೆ ಸಾವಿನ ಮನೆಗೆ ನಡೆಯುವ ಸಂದರ್ಭದಲ್ಲಿಯೂ ತಂದೆಯು ಪೊಲೀಸರ ಹಿಂದೆ ಕೈ ಕಾಲುಗಳನ್ನು ಬೀಸಿ ನಡೆಯುತ್ತ, ತಮಾಷೆಯ ಚೇಷ್ಟೆಗಳನ್ನು ಮಾಡುತ್ತಾ ಮಗನ ಮನದಲ್ಲಿ ಕೆಡುಕು ಮೂಡದಂತೆ ಕಾಪಾಡುತ್ತಾನೆ.

ತಮ್ಮ ಮಕ್ಕಳ ಆಯ್ಕೆಗಳು ಸುಂದರವಾಗಿರಬೇಕು ಎಂದು ಯಾವ ಅಪ್ಪ ಅಮ್ಮ ತಾನೇ ಬಯಸುವುದಿಲ್ಲ! ಆದರೆ ಅದಕ್ಕೆ ಪೂರಕವಾದ ವಾತಾವರಣ ನಿರ್ಮಿಸುವುದು ಕೂಡ ಅಪ್ಪ ಅಮ್ಮನ ಹೊಣೆಯಾಗಿರುತ್ತದೆ. ಮಕ್ಕಳು ಏನು ನೋಡಬೇಕು, ಏನು ನೋಡಬಾರದು ಎಂಬ ನಿರ್ಧಾರವನ್ನು ಬಹಳ ಜವಾಬ್ದಾರಿಯಿಂದ ತೆಗೆದುಕೊಳ್ಳಬೇಕು. ಹಿಂಸೆಯನ್ನು ನೋಡುವ ಮಕ್ಕಳ ಮನಸ್ಸು ಯಾವ ದಿಕ್ಕನತ್ತ ವಾಲುವುದೋ ಕಂಡು ಹಿಡಿಯುವವರು ಯಾರು?

ಪ್ರತಿಕ್ರಿಯಿಸಿ: feedback@sudha.co.in